ಸಾಕ್ಷಿಯನ್ನು ದಿಃ**27.01.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಸಿ.ಜಿ. ವಕೀಲರಿಂದ:

ನನ್ನ ಜಮೀನಿನ ದಕ್ಷಿಣ ದಿಕ್ಕಿಗೆ ಲಕ್ಷ್ಮಣರವರ ಜಮೀನು ಇರುತ್ತದೆ. ಸದರಿ ಲಕ್ಷ್ಮಣರವರು ಈಗ ಮನೆಯನ್ನು ಕಟ್ಟಿರುತ್ತಾರೆ.ಲಕ್ಷ್ಮಣರವರು ಮನೆ ಕಟ್ಟುವಾಗ ನಮ್ಮ ಆಸ್ತಿ ವಿಸ್ತೀರ್ಣ ಸರಿ ಇದೆಯೋ ಇಲ್ಲವೋ ಎಂದು ನಾನು ಪರೀಶಿಲಿಸಿರುತ್ತೇನೆ. ಲಕ್ಷ್ಮಣರವರ ಮನೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ಲಕ್ಷ್ಮಣರವರು ನನಗೆ ಆಸ್ತಿ ಮಾರಾಟ ಮಾಡಿರುವ ಮಾಲೀಕರಾಗಿರುತ್ತಾರೆ. ನನ್ನ ಆಸ್ತಿಯ ಪೂರ್ವಕ್ಕೆ ಈಗ ಡಾಂಬರ್ ರಸ್ತೆ ಇದೆ. ಸದರಿ ರಸ್ತೆ ಸುಮಾರು 15 ವರ್ಷಗಳಿಂದ ಡಾಂಬರೀಕರಣ ಮತ್ತು ಚರಂಡಿ ರಸ್ತೆ ಕೂಡ ಆಗಿರುತ್ತದೆ ಎಂದರೆ ಸರಿ. ಸದರಿ ರಸ್ತೆ ಸುಮಾರು 20-21 ಅಡಿ ಅಗಲ ಇರುತ್ತದೆ ಎಂದರೆ ಸಾಕ್ಷಿಯು 15 ಅಡಿ ಇರುತ್ತದೆ ಎಂದು ನುಡಿಯುತ್ತಾರೆ.

ನ್ಯಾಯಾಲಯದಿಂದ ಆಯುಕ್ತಕರನ್ನು ನೇಮಿಸಿ ಸದರಿ ರಸ್ತೆಯ ವಿಸ್ತೀರ್ಣದ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ನನಗೆ ಅಭ್ಯಂತರ ಇರುವುದಿಲ್ಲ. ರಸ್ತೆ 20 ಅಡಿ ಅಗಲ ಇದ್ದು, ನನ್ನ ಜಮೀನು ಸಹ 5 ಅಡಿ ರಸ್ತೆ ಅಗಲೀಕರಣ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಪೂರ್ವಕ್ಕೆ ಸುಮಾರು 450 ಅಡಿ ಗಳಷ್ಟು ಜಾಗ ರಸ್ತೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಜಮೀನಿನ ಪೂರ್ವಕ್ಕೆ 5 ಅಡಿ ಅಷ್ಟು ಜಾಗ ಅಂದರೆ ಒಟ್ಟು 450 ಅಡಿ ಜಾಗ ಉತ್ತರ-ದಕ್ಷಿಣ ಮುಖವಾಗಿ ರಸ್ತೆಗೆ ಹೋಗಿದ್ದರು ಸಹ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ 3 ¼ ಗುಂಟೆ ಜಮೀನಿನ ಪೈಕಿ ¼ ಗುಂಟೆ ಜಾಗ ಒತ್ತುವರಿ ಆಗಿರುವುದರಿಂದ ಹೂಡಿರುತ್ತೇನೆ. ಒತ್ತುವರಿ ಆಗಿರುವ ಬಗ್ಗೆ ಸರ್ವೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಯಾವುದೇ ದಾಖಲಾತಿ ಹಾಜರುಪಡಿಸದೇ ಇದ್ದರೂ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ದಾವೆ ವಜಾಗೊಂಡರೆ ನನಗೆ ನಷ್ಟ ಆಗುವುದಿಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿರವರ ಮನೆ 2012 ರಲ್ಲಿ ಗೃಹ ಪ್ರವೇಶ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆ ಸುಮಾರು 30X40 ಜಾಗದಲ್ಲಿ 3 ಅಂತಸ್ತಿನ ಮನೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ಗೃಹ ಪ್ರವೇಶ ಕಾರ್ಯಕ್ರಮಕ್ಕೆ ಹಾಜರಿದ್ದೆ ಎಂದರೆ ಸರಿಯಲ್ಲ. ಅಲ್ಲಿ 18X30 ಅಡಿಯ ಜಾಗದಲ್ಲಿ ಕಾರ್ ಶೆಡ್ ನಿರ್ಮಾಣ ಮಾಡಿ ಕಂಪೌಂಡ್ ಸಹ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಕಂಪೌಂಡ್ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಕಾರ್ ನಿಲ್ದಾಣಕ್ಕೆ ತಗಡಿನ ಶೆಡ್ ನಿರ್ಮಿಸಿ ಕಂಪೌಂಡ್ ಹಾಕಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಜಮೀನಿನಲ್ಲಿ ಕಂಪೌಂಡ್ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

ಕ್ರಯಕ್ಕೆಪಡೆದ ಜಮೀನಿನಲ್ಲಿ 30X40 ಜಾಗದಲ್ಲಿ ಆರ್.ಸಿ.ಸಿ. ಮನೆ ಮತ್ತು 18X 30 ಅಡಿ ಜಾಗದಲ್ಲಿ ಕಾರ್ ಶೆಡ್ ನಿರ್ಮಿಸಿ ಅವರೇ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಅವರ ಮನೆಯ ಗೃಹ ಪ್ರವೇಶಕ್ಕೆ ಹೋಗಿದ್ದರೂ ಸಹ ಮತ್ತು ಕಾರ್ ಶೆಡ್ ಕಂಪೌಂಡ್ ಬಗ್ಗೆಯೂ ಗೊತ್ತಿದ್ದರೂ ಸಹ ಆಗಿನಿಂದಲೂ 2017 ರವರೆಗೂ ಸುಮ್ಮನಿದ್ದು, ಈಗ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಆಸ್ತಿ ಉತ್ತರಕ್ಕೆ 32 ಅಡಿ ಮತ್ತು ದಕ್ಷಿಣಕ್ಕೆ 39 ಅಡಿ ಅಗಲ ಇರುತ್ತದೆ ಎಂದರೆ ಸಾಕ್ಷಿಯು ನನಗೆ

ಅಳತೆಯ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದರೆ ನನ್ನದು 3 ¼ ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಕ್ರಯಕ್ಕೆ ಪಡೆಯುವಾಗ ಉತ್ತರ ಕಡೆ ಕಡಿಮೆ ಮತ್ತು ದಕ್ಷಿಣಕ್ಕೆ ಹೆಚ್ಚು ಅಗಲ ಇರುವ ಬಗ್ಗೆ ಸರ್ವೆ ಮಾಡಿಸಿರುವುದಿಲ್ಲ. ನಾನು ಕ್ರಯಕ್ಕೆ ಪಡೆಯುವಾಗ ದಕ್ಷಿಣಕ್ಕೆ ಸುಮಾರು 1 ಎಕರೆ ಅಷ್ಟು ಜಾಗ ಖಾಲಿ ಇತ್ತು ಎಂದರೆ ಸರಿ. ದಕ್ಷಿಣಕ್ಕೆ ಇರುವ ಲಕ್ಷ್ಮಣರವರು ತಮ್ಮ ಮನೆ ಕಟ್ಟುವಾಗ ನನ್ನ ಆಸ್ತಿಯ ಎಷ್ಟು ಅಡಿ ಬಿಟ್ಟು ಮನೆ ಕಟ್ಟಿರುತ್ತಾರೆ ಎಂದು ನಾನು ಹೋಗಿ ನೋಡಿರುತ್ತೇನೆ. ನಾನು ಹೋಗದೇ ಇದ್ದರೂ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೋಗದ ಸಮಯದಲ್ಲಿ ಲಕ್ಷ್ಮಣ ಮತ್ತು ಅವರ ಕುಟುಂಬದವರು ಮನೆ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಪುರಸಭೆಯವರು ನನ್ನ ಆಸ್ತಿಯ 450 ಅಡಿಗಳಷ್ಟು ರಸ್ತೆ ಅಗಲೀಕರಣಕ್ಕೆ ಬಳಸಿಕೊಂಡಿದ್ದರು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ಮನೆ ಕಟ್ಟಲು ತಮ್ಮ 1 ½ ಗುಂಟೆ ಜಾಗವನ್ನು ಬ್ಯಾಂಕಿನಲ್ಲಿ ಅಡಮಾನ ಇಟ್ಟು ಸಾಲ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಈಗಲೂ ಸಾಲ ತೀರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಎಲ್ಲ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಒತ್ತುವರಿ ಆಗಿರುವ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸದೇ ಇದ್ದರೂ ಮತ್ತು ಯಾವುದೇ ವಾಜ್ಯ ಕಾರಣ ಇಲ್ಲದೆ ಇದ್ದರೂ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಕೇಸಿಗೂ ದಾಖಲಾತಿಗೂ

ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಕೇಸಿಗಾಗಿ ಪಕ್ಷಗಾರರಿಗೆ ಯಾವುದೇ ನೋಟಿಸ್ ನೀಡದೇ ಸುಳ್ಳು ನಕಾಶೆಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸುಳ್ಳು ದಾಖಲಾತಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.